ಕರ್ನಾಟಕ ಸರಕಾರ

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 30-01-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ರಾಷ್ಟ್ರೀಯ ಹೆಣ್ಣು ಮಗು ದಿನಾಚರಣೆ – 2015: "ಹೆಣ್ಣು ಮಗು ರಕ್ಷಿಸಿ - ಹೆಣ್ಣು ಮಗು ಓದಿಸಿ" ಉದ್ಘಾಟನೆ: ಶ್ರೀ ರೋಷನ್ ಬೇಗ್, ಮೂಲ ಸೌಲಭ್ಯ ಮತ್ತು ವಾರ್ತಾ ಸಚಿವರು, ಕರ್ನಾಟಕ ಸರ್ಕಾರ. ಹೆಣ್ಣು ಮಕ್ಕಳಿಗೆ ಶೌರ್ಯ ಮತ್ತು ಪ್ರತಿಭಾ ಪುರಸ್ಕಾರ: ಶ್ರೀ ಡಿ.ಕೆ. ಶಿವಕುಮಾರ್, ಇಂಧನ ಸಚಿವರು, ಕರ್ನಾಟಕ ಸರ್ಕಾರ | 31-01-2015 ಶನಿವಾರ ಬೆಳಗ್ಗೆ 10-30 ಗಂಟೆಗೆ | ಮಹಾತ್ಮಗಾಂಧಿ ಸ್ಮಾರಕ ನಿಧಿ (ಗಾಂಧಿ ಭವನ) ಕುಮಾರ ಪಾರ್ಕ್ ಈಸ್ಟ್, ಬೆಂಗಳೂರು |
| 2. | ಪತ್ರಿಕಾಗೋಷ್ಠಿ: ಶ್ರೀ ಕಾಗೋಡು ತಿಮ್ಮಪ್ಪ, ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ | 31-01-2015 ಶನಿವಾರ ಬೆಳಗ್ಗೆ 11-30 ಗಂಟೆಗೆ | ಕೊಠಡಿ ಸಂಖ್ಯೆ 106, ಮೊದಲ ಮಹಡಿ, ವಿಧಾನಸೌಧ, |
| 3. | ಪತ್ರಿಕಾಗೋಷ್ಠಿ: ಶ್ರೀ ಡಿ. ಹೆಚ್. ಶಂಕರಮೂರ್ತಿ, ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್. | 31-01-2015 ಶನಿವಾರ ಬೆಳಗ್ಗೆ 12-30 ಗಂಟೆಗೆ | ಕೊಠಡಿ ಸಂಖ್ಯೆ 117, ಮಾನ್ಯ ಸಭಾಪತಿಯವರ ಕೊಠಡಿ, ಮೊದಲ ಮಹಡಿ, ವಿಧಾನಸೌಧ, ಬೆಂಗಳೂರು. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಪ್ರತಿ ತಿಂಗಳು ರಾಷ್ಟ್ರೀಯಲೋಕ ಅದಾಲತ್

ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)

ಜನ ಸಾಮಾನ್ಯರ ಅನುಕೂಲಕ್ಕಾಗಿ ಪ್ರತಿ ತಿಂಗಳು ಒಂದೊಂದು ವಿಷಯದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ನಡೆಸಲಾಗುವುದೆಂದು ಕರ್ನಾಟಕ ರಾಜ್ಯದ ಉಚ್ಛ ನ್ಯಾಯಾಲಯದ ಹಿರಿಯ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ನ್ಯಾಯಮೂರ್ತಿ ಎನ್.ಕೆ. ಪಾಟೀಲ್ ಅವರು ತಿಳಿಸಿದರು.

ಇಂದು ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ತಿಳಿಸಿದ ಅವರು ಪ್ರತಿ ತಿಂಗಳ ಎರಡನೇ ಶನಿವಾರದಂದು ಒಂದೊಂದು ವಿಷಯದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಉಚ್ಛ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ನಡೆಸಲಾಗುವುದು. ಇದರಿಂದ ಮಾಧ್ಯಮ ವರ್ಗದ ಜನರಿಗೆ, ಗ್ರಾಮೀಣ ಜನರಿಗೆ, ಕಾರ್ಮಿಕರಿಗೆ, ಹಾಗೂ ವಲಸಿಗರಿಗೆ ತುಂಬಾ ಅನುಕೂಲವಾಗಲಿದೆ ಎಂದರು.

2015 ನೇ ಸಾಲಿನ ಮಾಸಿಕ ಲೋಕ್ ಅದಾಲತ್ ವೇಳಾಪಟ್ಟಿಯಂತೆ ಮೊದಲು ಫೆಬ್ರವರಿ 14 ರಂದು ಬ್ಯಾಂಕ್ ಸಾಲ ವಸೂಲಾತಿ ಮತ್ತು ವರ್ಗಾವಣೀಯ ಕುರಿತು ಮಾರ್ಚ್ 14 ರಂದು ಕಂದಾಯ, ನರೇಗಾ, ಭೂಸ್ವಾಧೀನ ಪ್ರಕರಣಗಳು, ಏಪ್ರಿಲ್ 11 ರಂದು ಕಾರ್ಮಿಕ ಮತ್ತು ಕೌಟುಂಬಿಕ ಪ್ರಕರಣಗಳು ಮೇ 9 ಮತ್ತು ಜೂನ್ 13 ರಂದು ಮೋಟಾರು ವಾಹನ, ಅಪಘಾತ ಪರಿಹಾರ ಮತ್ತು ವಿಮೆ ಪ್ರಕರಣಗಳು ಜುಲೈ 11 ರಂದು ವಿದ್ಯುತ್, ನೀರು, ದೂರವಾಣಿ, ಸಾರ್ವಜನಿಕ ಸೌಲಭ್ಯಗಳ ವಿವಾದಗಳು, ಆಗಸ್ಟ್ 8 ರಂದು ಗ್ರಾಹಕ ವ್ಯಾಜ್ಯಗಳು ಮತ್ತು ಕಂದಾಯ ಪ್ರಕರಣಗಳು ಸೆಪ್ಟೆಂಬರ್ 12 ರಂದು ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು ಹಾಗೂ ಅಕ್ಟೋಬರ್ 10 ರಂದು ಸಂಚಾರ , ಲಘು ಪ್ರಕರಣಗಳು ಮತ್ತು ಪುರಸಭೆಯ ಪ್ರಕರಣಗಳ ಕುರಿತು ಲೋಕ್ ಅದಾಲತ್ ಅನ್ನು ನಡೆಸಲಾಗುವುದೆಂದರು.

ಡಿಸೆಂಬರ್‌ನಲ್ಲಿ ನಡೆದ 2 ನೇ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಬಾಕಿ ಇದ್ದ 2,43,778 ಪ್ರಕರಣಗಳು ಹಾಗೂ 13,11,846 ವ್ಯಾಜ್ಯಪೂರ್ವ ಪ್ರಕರಣಗಳು ಸೇರಿದಂತೆ ಒಟ್ಟು 15,55,624 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ವಿಲೇವಾರಿ ಮಾಡಲಾಗಿದ್ದು, ಇದರಿಂದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳಲ್ಲಿ ಶೇಕಡ 19 ರಷ್ಟು ತಗ್ಗಿದೆ ಎಂದು ತಿಳಿಸಿದರು.

ಲೋಕ್ ಅದಾಲತ್‌ನಲ್ಲಿ ಪ್ರಕರಣವು ಇತ್ಯರ್ಥಗೊಂಡಲ್ಲಿ ಅವರಿಗೆ ನ್ಯಾಯಾಲಯದ ಸಂಪೂರ್ಣ ಶುಲ್ಕವನ್ನು ಹಿಂದಿರುಗಿಸಲಾಗುವುದು. ಅಲ್ಲದೆ ಇಲ್ಲಿ ಪ್ರಕರಣವು ರಾಜಿ ಸಂಧಾನದ ಮೂಲಕ ಸೌಹಾರ್ದಯುತವಾಗಿ ಇತ್ಯರ್ಥವಾಗುವುದರಿಂದ ವ್ಯಾಜ್ಯವು ಕೊನೆಗೊಂಡು ಪಕ್ಷಕಾರರಿಬ್ಬರಿಗೂ ಮುಂಚಿನ ಬಾಂಧವ್ಯವು ಉಳಿಯುವುದರಿಂದ ಸಾರ್ವಜನಿಕರು ಲೋಕ್ ಅದಾಲತ್ ಕಡೆ ಆಕರ್ಷಿತರಾಗುತ್ತಿದ್ದಾರೆ. ಆದ್ದರಿಂದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಜನಸಾಮಾನ್ಯರ ವ್ಯಾಜ್ಯಗಳನ್ನು ಮನೆ ಬಾಗಿಲಿನಲ್ಲೇ ಇತ್ಯರ್ಥಪಡಿಸಲು ಪ್ರತಿ ತಿಂಗಳು ಒಂದು ವಿಷಯದ ಬಗ್ಗೆ ಅದಾಲತ್‌ನ್ನು ನಡೆಸಲು ತೀರ್ಮಾನಿಸಿದೆ ಎಂದು ನ್ಯಾಯಮೂರ್ತಿಗಳು ತಿಳಿಸಿದರು.

ಬಿಜಿಪಿ/ಕೆಎಂ

# ಸಂಚಾರ ಗಣತಿ

**ಬೆಂಗಳೂರು, ಜನವರಿ ೩೦ (ಕರ್ನಾಟಕ ವಾರ್ತೆ)**

**ರಾಜ್ಯದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ ವಾಹನಗಳ ಸಂಚಾರದ ಗಣತಿಯನ್ನು ನಡೆಸಲಾಗುತ್ತಿದ್ದು, 2015ನೇ ಸಾಲಿನ ರಸ್ತೆ ಸಂಚಾರ ಗಣತಿಯನ್ನು ದಿನಾಂಕ: 19–02–2015 ರ ಬೆಳಿಗ್ಗೆ 6.00 ಗಂಟೆಯಿಂದ 26–02–2015 ರ ಬೆಳಿಗ್ಗೆ 6–00 ಗಂಟೆಯವರೆಗೆ ಸತತವಾಗಿ 7 ದಿನಗಳ ಕಾಲ ನಡೆಸಲಾಗುವುದು. ಈ ಗಣತಿಗೆ ಸುಮಾರು 3737 ಗಣತಿ ಕೇಂದ್ರಗಳನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಆಯ್ಕೆ ಮಾಡಲಾಗಿದೆ.**

**ಈ ಗಣತಿಯ ಮುಖ್ಯ ಉದ್ದೇಶವೇನೆಂದರೆ, ವಾಹನ ಸಂಚಾರದ ಬೆಳವಣಿಗೆ ತೀವ್ರತೆಯನ್ನು ಗಮನಿಸಿ ರಸ್ತೆಗಳ ಮೇಲ್ಮೈಯನ್ನು ಅಭಿವೃದ್ಧಿ ಪಡಿಸುವುದು, ರಸ್ತೆಗಳನ್ನು ಅಗಲಪಡಿಸುವುದು ಹಾಗೂ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು ಇದೇ ಮೊದಲಾದ ಹಲವಾರು ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಲು ಮತ್ತು ಕೈಗೆತ್ತಿಗೊಳ್ಳಲು ಅನುಕೂಲವಾಗುವುದು.**

**ವಾಹನ ಸಂಚಾರ ವಿವರಗಳನ್ನು ಸಂಗ್ರಹಿಸಲು ರಾಜ್ಯದಲ್ಲಿನ 3737 ಗಣತಿ ಕೇಂದ್ರಗಳಲ್ಲಿ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್‌ಗಳನ್ನು ನೇಮಿಸಲಾಗಿದೆ. ದಿನಾಂಕ: 19–02–2015 ರಿಂದ 26–02–2015 ರವರೆಗೆ ನಡೆಸಲಾಗುವ ಈ ವಾಹನ ಸಂಚಾರದ ಗಣತಿಯನ್ನು ಯಶಸ್ವಿಯಾಗಿ ನಡೆಸಲು ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸಲು ಕೋರಲಾಗಿದೆ.**
ಬಾಬು:ಜಿಪಿಆರ್.

# CONDUCTING OF 2015 ROAD TRAFFIC CENSUS

Bangalore, January 30 (Karnataka Information)

Karnataka Public Works, Ports and Inland Water Transport Department, will conduct Road Traffice Census on PWD roads in the State.

Road Traffic Census will be conducted for the present year 2015 on State Highways and Major District Roads in the State from 6.00 AM on 19th February 2015 to 6.00 AM on 26th February 2015 for a period of 7 days. The present Census covers 3737 Count Posts situtated on State Highways and Major District Roads in the State. The objective of the Survey is to assess the traffic volume on different category of roads in the state, which will enable the Government to take decisions for improvements to existing roads, upgradation of roads to the higher categories, surface improvements, widening of roads etc.

The Traffic Census data will be collected at the Count Posts by the nominated traffic enumerator's viz., Assistatnt Engineer/Junior Engineers at about

3737 Count Posts in the State. All the vehicle operators and public in general are requested to co-operate for the Road Traffic Census on these days i.e., 19th to 26th February 2015.
babu/gpr

## ಸೇನೆಗೆ ನೇಮಕಾತಿ

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**

**ಇನ್‌ಫೆಂಟ್ರ ಬಟಾಲಿಯನ್ ಪ್ಯಾರಾದಲ್ಲಿ ಮಾರ್ಚ್ 16 ರಿಂದ ಮಾರ್ಚ್ 19 ರವರೆಗೆ ಟೆರಿಟೋರಿಯಲ್ ಆರ್ಮಿಯ ಭರ್ತಿಗೆ ವಿವಿಧ ಹುದ್ದೆಗಳ ನೇಮಕಾತಿಗೆ ಆಹ್ವಾನಿಸಲಾಗಿದೆ.**

**ಅಭ್ಯರ್ಥಿಗಳು ಆಂಧ್ರ ಪ್ರದೇಶ, ಗುಜರಾತ್, ಗೋವಾ, ಕರ್ನಾಟಕ, ಕೇರಳ, ಮಹಾರಾಷ್ಟ್ರ,. ರಾಜಸ್ಥಾನ, ತಮಿಳುನಾಡು, ಕೇಂದ್ರಾಡಳಿತ ಪ್ರದೇಶವಾದ ದಾದ್ರ ಮತ್ತು ಹಾವೇಲಿ, ದಾಮನ್ ಮತ್ತು ಡಿಯೂ ಲಕ್ಷ್ವಾದ್ವೀಪ ಮತ್ತು ಪಾಂಡಿಚೇರಿ ರಾಜ್ಯದವರಾಗಿರಬೇಕು.**

**ಆಸಕ್ತ ಅಭ್ಯರ್ಥಿಗಳು ಇನ್ಫೆಂಟ್ರ ಬಟಾಲಿಯನ್ ಪ್ಯಾರಾ ಯೂನಿಟನ್ನು ನೇರವಾಗಿ ಅಥವಾ ಅವರ ದೂರವಾಣಿ ಸಂಖ್ಯೆ 080–23333065 ಯನ್ನು ಸಂಪರ್ಕಿಸಬಹುದು.**

ಬಾಬು:ಜಿಪಿಆರ್.

## ಮಹಾತ್ಮ ಗಾಂಧೀಜಿಯವರಿಗೆ ಗೌರವಾರ್ಪಣೆ

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**

**ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತ್ಮಾತರಾದವರ ಸ್ಮರಣಾರ್ಥಕವಾಗಿ ಇಂದು ವಿಕಾಸಸೌಧ ಹಾಗೂ ವಿಧಾನಸೌಧದ ನಡುವೆ ಇರುವ ಮಹಾತ್ಮ ಗಾಂಧೀಜಿಯವರ ಪ್ರತಿಮೆಯ ಬಳಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಮೂಲಕ ಗೌರವ ಸಲ್ಲಿಸಲಾಯಿತು.**

**ಗೃಹ ಸಚಿವ ಶ್ರೀ ಕೆ. ಜೆ. ಜಾರ್ಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್. ಕೆ. ಪಾಟೀಲ್, ನಗರಾಭಿವೃದ್ಧಿ ಸಚಿವ ಶ್ರೀ ವಿನಯ ಕುಮಾರ್ ಸೊರಕೆ, ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ ಅವರು ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ನಂತರ ಎರಡು ನಿಮಿಷ ಮೌನಾಚರಣೆ ನಡೆಸಲಾಯಿತು.**

**ಇದೇ ಸಂದರ್ಭದಲ್ಲಿ ಗಾಂಧೀಜಿಯವರ ಕುರಿತಂತೆ ಭಜನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸರ್ಕಾರದ ಹಿರಿಯ ಅಧಿಕಾರಿಗಳು, ಸಚಿವಾಲಯದ ಸಿಬ್ಬಂದಿಯವರು ಉಪಸ್ಥಿತರಿದ್ದರು.**

ಬಾಬು:ಸೌಮ್ಯ:ಜಿಪಿಆರ್.

# ಪತ್ರಿಕೋದ್ಯಮ ವೃತ್ತಿಯಾಗಿ ಉಳಿದಿಲ್ಲ

ದಿನೇಶ್ ಅಮೀನ್ ಮಟ್ಟು

ಬೆಂಗಳೂರು, ಜನವರಿ ೩೦ (ಕರ್ನಾಟಕ ವಾರ್ತೆ)

ಪತ್ರಿಕೋದ್ಯಮ ಇಂದು ವೃತ್ತಿಯಾಗಿ ಉಳಿದಿಲ್ಲ ಬದಲಾಗಿ ವಾಣಿಜ್ಯೋದ್ಯಮವಾಗಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಶ್ರೀ ದಿನೇಶ್ ಅಮಿನ್ ಮಟ್ಟು ಅವರು ವಿಷಾದ ವ್ಯಕ್ತಪಡಿಸಿದರು.

ಅವರು ಇಂದು ವಾರ್ತಾ ಇಲಾಖೆಯು ಏರ್ಪಡಿಸಿದ್ದ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತಾನಾಡುತ್ತಿದ್ದರು.

೯೦ ರ ದಶಕದ ನಂತರ ಮಾಧ್ಯಮಗಳಲ್ಲಿ ಪ್ರಮುಖ ಬದಲಾವಣೆಗಳು ಆಗಿದ್ದು. ಆರ್ಥಿಕ ಉದಾರೀಕರಣ ಮತ್ತು ಕೋಮುವಾದವು ಪತ್ರಿಕೋದ್ಯಮವು ಬದಲಾಗಲು ಮುಖ್ಯ ಕಾರಣ ಎಂದು ಹೇಳಿದರು.

ಮಾಧ್ಯಮವು ಇಂದು ಜನರಿಗೆ ಶಿಕ್ಷಣ ನೀಡಬೇಕು, ಆದರೆ ವ್ಯಾಪಾರ ಮನೋಧರ್ಮದಿಂದ ಸಮಾಜಕ್ಕೆ ಏನು ಕೊಡಬೇಕು ಅದನ್ನು ಕೊಡ್ಡುತ್ತಿಲ್ಲ. ಮಾಧ್ಯಮವು ವೃತ್ತಿಯಾಗಿ ಉಳಿದಿಲ್ಲ, ಬದಲಿಗೆ ಉದ್ಯಮವಾಗಿದೆ ಎಂದರಲ್ಲದೆ ಅವರು ಮಾಧ್ಯಮಗಳು ಸಾರ್ವಜನಿಕರಿಗೆ ಸತ್ಯ ಹೇಳಬೇಕು ಆದರೆ ಅದು ಆಗುತ್ತಿಲ್ಲ ಎಂದು ಹೇಳಿದರು.

ಪತ್ರಿಕೆಗಳು ವಿಶ್ವಾಸ ಉಳಿಸಿಕೊಳ್ಳಬೇಕು. ಜನಪರ ಕೆಲಸ ಮಾಡಬೇಕು ಎಲ್ಲಾ. ವರ್ಗದವರಿಗೂ ಪ್ರಾತಿನಿಧ್ಯ ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡಬೇಕು ಎಂದರು.

ಪತ್ರಿಕೋದ್ಯಮದಲ್ಲಿ ಸಾಕಷ್ಟು ಬದಲಾವಣೆಯಾಗಿದ್ದು ವೈಚಾರಿಕವಾದ ನಿಲುವುಗಳು ಗಾಳಿಯಲ್ಲಿ ತೇಲಿ ಹೋಗುತ್ತಿದೆ. ಮುಂದಿನ ದಿನಗಳಲ್ಲಿ ಇದು ಭಯಂಕರವಾಗಿರುತ್ತದೆ ಎಂದು ಎಚ್ಚರಿಸಿದರು.

ಪತ್ರಕರ್ತರಾಗಲು ಬಯಸುವವರು ಸಂವೇದನಾಶೀಲ ಗುಣವನ್ನು ಬೆಳೆಸಿಕೊಳ್ಳಬೇಕು ಮತ್ತು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು. ಭರವಸೆ ಜೊತೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು, ಪತ್ರಿ ದಿನ ಒಂದು ಪತ್ರಿಕೆಯನ್ನು ಕಡ್ಡಾಯ ಓದಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ತರಬೇತಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಹಾಗೂ ಸ್ಟೈಫಂಡ್ ಚೆಕ್‌ಗಳನ್ನು ವಿತರಿಸಿದರು.

ಸಮಾರಂಭದಲ್ಲಿ ಹಿರಿಯ ಪತ್ರಕರ್ತರಾದ ಶ್ರೀ ಕೋಟಿಗಾನಹಳ್ಳಿ ರಾಮಯ್ಯ, ಎನ್.ಎಸ್.ಶಂಕರ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕರು ಶ್ರೀ ಎನ್.ಭೃಂಗೇಶ್ ಉಪಸ್ಥಿತರಿದ್ದರು.